ಮಹಿಳಾ ಪೋಲೀಸರನ್ನು ಸ್ವಲ್ಪ ಹೆಚ್ಚಾಗಿ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಕೊನೆಯಪಕ್ಷ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಮತ್ತು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಾದರೂ ಇವರ ಸಂಖ್ಯೆ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಧರ್ಮಸಿಂಗ್ :– ಮಾಡಲೇಬೇಕಾಗುತ್ತದೆ, ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :– ಈ ರಾಜ್ಯದಲ್ಲಿ ಪೋಲೀಸರ ಸಂಖ್ಯೆಯನ್ನು ಜಾಸ್ತಿ ಮಾಡುವ ಬಗ್ಗೆ ಸರ್ಕಾರ ಒಂದು ನಿರ್ಧಾರ ತೆಗೆದುಕೊಂಡಿದೆ ಎಂದು ಹೇಳುತ್ತಿದ್ದೀರಿ. ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯದಲ್ಲಿ ಪೋಲೀಸರ ಸಂಖ್ಯೆ ಹೆಚ್ಚಾಗಿದೆಯೇ ಅಥವಾ ಕಡಿಮೆಯಾಗಿದೆಯೇ ಎಂದು ಹೇಳುತ್ತೀರಾ ? ಇನ್ನೊಂದು ಪ್ರಶ್ನೆ ಏನೆಂದರೆ, ಈ ವರ್ಷ ಎಷ್ಟು ಪೋಲೀಸ್ ಸ್ಟೇಷನ್‌ಗಳನ್ನು ಕರ್ನಾಟಕ ರಾಜ್ಯದಲ್ಲಿ ಮಾಡ ಬೇಕೆಂದು ಇದ್ದೀರಿ ? ನನ್ನ ಕ್ಷೇತ್ರವಾದ ಚಾಮರಾಜನಗರ ತಾಲ್ಲೂಕು ಬಹಳ ಸೂಕ್ಷ್ಮವಾದ ಕ್ಷೇತ್ರ. ಈ ಸಂದರ್ಭದಲ್ಲಿ ಅಲ್ಲಿ ಒಂದು ಪೋಲೀಸ್ ಸ್ಟೇಷನ್ ಕೊಡುವುದಕ್ಕೆ ಭರವಸೆ ಕೊಡುತ್ತೀರಾ ? ಮತ್ತೆ ಈ ಪೋಲೀಸ್ ಕಾನ್‌ಸ್ಟೇಬಲ್‌ಗಳೇನು ಇದ್ದಾರೆ, ಅವರಿಗೆ ಚಳುವಳಿ ಗಿಳುವಳಿ ನಡೆದಾಗ ಕೊಡತಕ್ಕಂಥ ದಿನಭತ್ಯೆ ಏಳು ರೂಪಾಯಿ.....

ಅಧ್ಯಕ್ಷರು :– ಚಳುವಳಿ ಸರಿ; ಆದರೆ ಈ ಗಿಳುವಳಿ ಯಾವುದು ?

(ನಗು)

ಶ್ರೀ ವಾಟಾಳ್ ನಾಗರಾಜ್ :– ಇಂತಹ ಸಂದರ್ಭಗಳಲ್ಲಿ ಅವರಿಗೆ ಬರೀ ಏಳು ರೂಪಾಯಿ ದಿನಭತ್ಯೆ ಕೊಡುತ್ತಿದ್ದಾರೆ. ಅದನ್ನು ಜಾಸ್ತಿಮಾಡಿ ಒಂದು ದಿನದ ವೇತನವನ್ನಾದರೂ ಕೊಡುವುದಕ್ಕೆ ಸರ್ಕಾರ ತೀರ್ಮಾನ ಮಾಡುತ್ತದೆಯೇ ?

ಶ್ರೀ ಧರ್ಮಸಿಂಗ್ :– ಈಗಾಗಲೇ ನಾವು 5 ವರ್ಷಗಳ ಅವಧಿಯಲ್ಲಿ 383 ರೂರಲ್ ಪೋಲೀಸ್ ಸ್ಟೇಷನ್ಸ್, 199 ಟೌನ್ ಪೋಲೀಸ್ ಸ್ಟೇಷನ್ಸ್, ಮಾಡಬೇಕೆಂದು ಮಾಡಿದ್ದೇವೆ. ಇದರಲ್ಲಿ ಈ ವರ್ಷ 5ನೇ ಒಂದು ಭಾಗದಷ್ಟು ಮಾಡಲು ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿದಾಗ 11 ಪೋಲೀಸ್ ಸ್ಟೇಷನ್‌ಗಳಿಗೆ ಶಿಫಾರಸ್ಸು ಮಾಡಿದ್ದಾರೆ. ಅದು ಸಾಲದು, ಇನ್ನೂ ಹೆಚ್ಚು ಮಾಡಬೇಕಾಗಿದೆ. ನಿಮ್ಮ ಚಾಮರಾಜನಗರಕ್ಕೂ ಏನು ಬೇಡತಕ್ಕದ್ದು ಇದೆ, ಅದು ಕೂಡ ಪರಿಶೀಲನೆಯಲ್ಲಿದೆ. ಭತ್ಯೆ ವಿಚಾರದಲ್ಲಿ ಕೂಡ ಈಗಾಗಲೇ ವಿಚಾರ ಮಾಡಿದ್ದೇವೆ. ಅದನ್ನು ಹೆಚ್ಚಿಸತಕ್ಕದ್ದನ್ನು ಕೂಡ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :– ಬೇರೆ ರಾಜ್ಯಗಳಿಗೆ ಹೋಲಿಸಿದರೆ ?

ಶ್ರೀ ಧರ್ಮಸಿಂಗ್ :– ಈಗ ಕರ್ನಾಟಕದಲ್ಲಿ 1,475 ಜನರಿಗೆ ಒಬ್ಬ ಕಾನ್‌ಸ್ಟೇಬಲ್ ಇದ್ದಾರೆ. ಬೇರೆ ರಾಜ್ಯ-ಗಳಲ್ಲಿ ಬೇರೆ ಬೇರೆ ರೀತಿ ಇದೆ. ಮಹಾರಾಷ್ಟ್ರದಲ್ಲಿ 383 ಜನರಿಗೆ ಒಬ್ಬ ಕಾನ್‌ಸ್ಟೇಬಲ್ ಇದ್ದಾನೆ. ಬೇರೆ ರಾಜ್ಯ ಗಳಿಗೆ ಹೋಲಿಸಿದರೆ ನಮ್ಮಲ್ಲಿ ಸ್ವಲ್ಪ ಕಡಿಮೆ ಇದೆ. ಅದಕ್ಕಾಗಿ ಇನ್ನು ಐದು ವರ್ಷಗಳಲ್ಲಿ ನಾವು ಒಂದು ಸ್ಕೀಮ್‌ನ್ನು ಹಾಕಿಕೊಂಡಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ :– ಪರಿಜನ ಗಿರಿಜನ ಪದವೀಧರರಿಗೆ ಉದ್ಯೋಗ ಅವಕಾಶ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 279 (1173)

ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪರಿಜನ ಗಿರಿಜನ ಪದವೀಧರರ ಸಂಖ್ಯೆ ಎಷ್ಟು ? ಇವರುಗಳಲ್ಲಿ ಸ್ಪೈಫಂಡರಿ ಪದವೀಧರರ ಸಂಖ್ಯೆ ಎಷ್ಟು ?

ಆ) ಇದರಲ್ಲಿ ಪ್ರಥಮ ದರ್ಜೆಯ ಪದವೀಧರರೆಷ್ಟು ? ಇವರಿಗೆ ವಿಶೇಷ ನೇಮಕಾತಿಯಲ್ಲಿ ನೌಕರಿ ಕೊಡಲು ಸರ್ಕಾರ ಉದ್ದೇಶಿಸಿದೆಯೇ ?

ಇ) ಇದುವರೆವಿಗೂ ವಿಶೇಷ ನೇಮಕಾತಿಯಲ್ಲಿ ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲಾಗಿದೆ.

ಈ) ವಿಶೇಷ ನೇಮಕಾತಿಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ? ಅವುಗಳನ್ನು ಭರ್ತಿ ಮಾಡುವ ಯೋಜನೆ ಸರ್ಕಾರಕ್ಕಿದೆಯೇ ?

ಶ್ರೀ ಬಿ. ಶಿವಣ್ಣ (ಕಾನೂನು, ಸಮಾಜ ಕಲ್ಯಾಣ ಸಚಿವರು) :-

ಆ) 1) ಉದ್ಯೋಗ ವಿನಿಮಯ ಕೇಂದ್ರದಲ್ಲಿ ದಿನಾಂಕ 30-9-90 ರವರೆಗೆ ನೊಂದಾಯಿಸಿದ ಹರಿಜನ ಗಿರಿಜನ ಪದವೀಧರರ ಸಂಖ್ಯೆ 9,761.

2) ಸ್ಪೈಘಂಡರಿ ಪದವೀಧರರ ಸಂಖ್ಯೆ 85.

ಆ) ಪ್ರಥಮ ದರ್ಜೆ ಪದವೀಧರರ ಸಂಖ್ಯೆ ಲಭ್ಯವಿರುವುದಿಲ್ಲ. ವಿಶೇಷ ನೇಮಕಾತಿ ನಿಯಮಗಳಲ್ಲಿ ಕೆಲವು ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಅವರುಗಳ ಪೈಕಿ ಪ್ರಥಮ, ದ್ವಿತೀಯ ಅಥವಾ ತೃತೀಯ ಸ್ಥಾನ ಪಡೆದ ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ನೇಮಕ ಮಾಡಲು ಅಸ್ಪದವಿದೆ.

ಇ) ಮೂವರನ್ನು ನೇಮಕ ಮಾಡಲಾಗಿದೆ.

ಈ) ವಿಶೇಷ ನೇಮಕಾತಿ ನಿಯಮಗಳಡಿಯಲ್ಲಿ 84 ಹುದ್ದೆಗಳನ್ನು ಗುರುತಿಸಲಾಗಿದೆ. ಹಾಗೂ ಇವುಗಳನ್ನು ನಿಯಮಾನುಸಾರ ಭರ್ತಿ ಮಾಡುವ ಯೋಜನೆ ಇದೆ.

ಶ್ರೀಮತಿ ಮಲ್ಲಾಜಮ್ಮ :- ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆಯಲ್ಲಿ ಇದುವರೆಗೆ ವಿಶೇಷ ನೇಮಕಾತಿಯಲ್ಲಿ ಪರಿಶಿಷ್ಟಜಾತಿ ಮತ್ತು ವರ್ಗಗಳಿಗೆ ಸೇರಿದ ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಿದ್ದೀರಿ ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ 3 ಜನರನ್ನು ನೇಮಕ ಮಾಡಿದ್ದೇವೆ ಎಂದು ತಿಳಿಸಿದ್ದಾರೆ. ಉಳಿದವರ ಸಂಖ್ಯೆ ಎಷ್ಟು ? ಏಕೆ ಇದುವರೆಗೆ ಅವರನ್ನು ಭರ್ತಿ ಮಾಡಿಲ್ಲ ಎಂದು ನಾನು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ :- ಈ ಪ್ರಶ್ನೆಗೆ ಉತ್ತರ ವಿದ್ಯಾ ಇಲಾಖೆಯಿಂದ ಕೂಡ ಬರಬೇಕಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಮತ್ತು ಸ್ಪೈಘಂಡರಿ ಪದವೀಧರರ ಸಂಖ್ಯೆಯನ್ನು ಲೇಬರ್ ಡಿಪಾರ್ಟಮೆಂಟಿನಿಂದಲೂ ಪಡೆಯಬೇಕು. ಸ್ಪೆಷಲ್ ರಿಕ್ರೂಟ್‌ಮೆಂಟ್ ಡಿ.ಪಿ.ಎ. ಆರ್. ನಿಂದ ಬರಬೇಕು. ಹೀಗಾಗಿ ಈ ಮಾಹಿತಿಗಳನ್ನು ಸಂಗ್ರಹ ಮಾಡುವುದರಲ್ಲಿ ತೊಂದರೆಯಾಗಿದೆ. ಆದ್ದರಿಂದ ಕೊಟ್ಟಿರುವ ಉತ್ತರ ಕೂಡ ಸರಿ ಎಂದು ನನಗೆ ಕಾಣಿಸುತ್ತಿಲ್ಲ. ಈ ಉತ್ತರ ಅಷ್ಟು ಸಮಂಜಸವಾಗಿಲ್ಲ. ಮಾನ್ಯ ಸದಸ್ಯರು ನನ್ನ ಹತ್ತಿರ ಡಿಸ್‌ಕಸ್ ಮಾಡಿದರೆ ಒಳ್ಳೆಯದು...

ಅಧ್ಯಕ್ಷರು :- ಅವರು ಕೊಟ್ಟಿರತಕ್ಕ ಉತ್ತರ ಅವರಿಗೆ ಸಮಂಜಸವಾಗಿಲ್ಲ; ಇನ್ನು ನಿಮಗೆ ಹೇಗೆ ಸಮಂಜಸ ವಾಗುತ್ತದೆ. ಏಕೆಂದರೆ, ಜೆನಿಯನ್ ಡಿಫಿಕಲ್ಟೀಸ್ ಇದೆ; ಅವರು ಮಾಹಿತಿಗಳನ್ನು ಎಜ್ಯುಕೇಷನ್ ಡಿಪಾರ್ಟಮೆಂಟಿನಿಂದ, ಲೇಬರ್ ಡಿಪಾರ್ಟ್‌ಮೆಂಟ್‌ನಿಂದ, ಡಿ. ಪಿ. ಎ. ಆರ್. ನಿಂದ ತರಿಸಿಕೊಳ್ಳಬೇಕು. ಈ ಮೂರು ಇಲಾಖೆಗಳಿಂದ ತರಿಸಿಕೊಂಡು, ಅದನ್ನು ಸಂಯೋಜನೆ ಮಾಡಿ ಸದನದ ಮುಂದೆ ಇಡಬೇಕು. ಆದ್ದಂರಿಂದ ಈ ಪ್ರಶ್ನೆಯನ್ನು ವಿತ್ ಹೆಲ್ಡ್ ಮಾಡೋಣವೇ.

ಶ್ರೀ ಬಿ. ಶಿವಣ್ಣ :- ಆಗಬಹುದು.

ಶ್ರೀ ಚೆ. ಸಿ. ಮಧುಸ್ವಾಮಿ :- ಈ ಮೂರು ವಿಷಯಗಳನ್ನು ನೋಡುವುದಕ್ಕೆ ಪ್ರತಿ ಜಿಲ್ಲೆಯಲ್ಲೂ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಇದೆ. ಈ ಮಾಹಿತಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ರೆಡಿ ಇರಬೇಕು.

ಅಧ್ಯಕರು :- ಈ ಪ್ರಶ್ನೆ ಇನ್ನೊಂದು ಸಾರಿ ಬರುತ್ತದೆ.

ವಿಷಯ :- ಜೀವಾವಧಿ ಶಿಕ್ಷೆಯಾದ ಖೈದಿಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 281 (1157)

ಶ್ರೀ ಬಾಬುಗೌಡ ರುದ್ರಗೌಡ ಪಾಟೀಲ್ (ಕಿತ್ತೂರ) :- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಬೇರೆ ರಾಜ್ಯಗಳಲ್ಲಿ ಜೀವಾವಧಿ ಶಿಕ್ಷೆಯಾದ ಖೈದಿಗಳು ಕೇವಲ 10 ವರ್ಷ 6 ತಿಂಗಳು ಶಿಕ್ಷೆ ಅನುಭವಿಸಿದಕೂಡಲೇ ಬಿಡುಗಡೆಯಾಗುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ ?